downloaded from: www.kpscvaani.com

# GPSTR-2017 (DE)

**EXAMINATION CODE : 03 A**

ನೋಂದಣಿ ಸಂಖ್ಯೆ/Registration No.

ಪ್ರಶ್ನೆ ಪತ್ರಿಕೆ ಪುಸ್ತಿಕೆ ಕ್ರಮಸಂಖ್ಯೆ / Question Booklet Sl. No.

5727755

## ಪ್ರಶ್ನೆ ಪತ್ರಿಕೆ ಪುಸ್ತಿಕೆ – ಪತ್ರಿಕೆ-3

(ಪ್ರಶ್ನೆ ಪತ್ರಿಕೆ ಪುಸ್ತಿಕೆಯಲ್ಲಿ ನೀಡಲಾಗಿರುವ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ)

ವಿಷಯ : ಭಾಷಾ ಸಾಮರ್ಥ್ಯ (ವಿವರಣಾತ್ಮಕ ಪರೀಕ್ಷೆ)

ಗರಿಷ್ಠ ಅಂಕಗಳು :100 ಗರಿಷ್ಠ ಸಮಯ : 2.00 ಗಂಟೆಗಳು ಅವಧಿ ಮಧ್ಯಾಹ್ನ : 2.30 ರಿಂದ 4.30 ರವರೆಗೆ

### ಅಭ್ಯರ್ಥಿಗಳಿಗೆ ಸೂಚನೆಗಳು

1. ಮೊಹರು ಮಾಡಿರುವ ಪ್ರಶ್ನೆಪತ್ರಿಕೆ ಪುಸ್ತಿಕೆಯು 100 ಅಂಕಗಳಿಗೆ ವಿವರಣಾತ್ಮಕ ಪ್ರಶ್ನೆಗಳನ್ನು ಒಳಗೊಂಡಿದೆ.
2. ಉತ್ತರ ಪತ್ರಿಕೆಯಲ್ಲಿ ಸ್ಪಷ್ಟವಾಗಿ ಪ್ರಶ್ನೆ ಸಂಖ್ಯೆಗಳನ್ನು ಬರೆಯಿರಿ.
3. ಒಂದೇ ಪ್ರಶ್ನೆಗೆ ಉತ್ತರವನ್ನು ಪುನರಾವರ್ತಿಸಬಾರದು.
4. ಅವಶ್ಯಕತೆ ಇರುವಲ್ಲಿ ಚಿತ್ರಗಳು, ಕೋಷ್ಟಕಗಳು, ನಕ್ಷೆಗಳು ಮತ್ತು ಫ್ಲೋಚಾರ್ಟ್‌ಗಳನ್ನು ಬಿಡಿಸಿ.
5. ಪರೀಕ್ಷಾ ಕೊಠಡಿಯೊಳಗೆ ಕ್ಯಾಲುಕ್ಯುಲೇಟರ್ ಹಾಗೂ ಮೊಬೈಲ್ ಫೋನ್‌ಗಳನ್ನು ತೆಗೆದುಕೊಂಡು ಹೋಗಲು ಅವಕಾಶವಿರುವುದಿಲ್ಲ.
6. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರ ಮಾಡುವುದು (ನಕಲು) ಕಂಡುಬಂದಲ್ಲಿ, ಅಂತಹ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹವರ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮವನ್ನು ತೆಗೆದುಕೊಳ್ಳಲಾಗುವುದು.
7. ಆನ್‌ಲೈನ್ ಅರ್ಜಿಯಲ್ಲಿ ಘೋಷಿಸಿರುವಂತೆ ವಿವರಣಾತ್ಮಕ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಭಾಷಾ ಮಾಧ್ಯಮದಲ್ಲಿ ಬರೆಯತಕ್ಕದ್ದು.

SEAL

downloaded from: www.kpscvaani.com

Scanned by CamScanner

downloaded from: www.kpscvaani.com

I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಕೊಟ್ಟಿರುವ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ. (5 × 1 = 5)

1. ಅಮರ
2. ಕಾಳಗ
3. ಕಲುಷಿತ
4. ಇಳೆ
5. ಕರ

ಕೊಟ್ಟಿರುವ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ. (5 × 1 = 5)

6. ಅನುಕೂಲ
7. ಕ್ಷಯ
8. ಜ್ಞಾನಿ
9. ಪ್ರಿಯ
10. ಸಹಕಾರ

ಕೊಟ್ಟಿರುವ ನುಡಿಗಟ್ಟುಗಳ ಅರ್ಥವನ್ನು ಬರೆಯಿರಿ. (5 × 1 = 5)

11. ಅಡ್ಡದಾರಿ ಹಿಡಿ
12. ಕುಗ್ಗಿಹೋಗು
13. ಕಾಲೂರು
14. ಅರಣ್ಯರೋದನ
15. ನೀರಿಗೆ ಹಾಕು



downloaded from: www.kpscvaani.com

Scanned by CamScanner

downloaded from: www.kpscvaani.com

ಕೊಟ್ಟಿರುವ ಗಾದೆಗಳನ್ನು ಪೂರ್ಣಗೊಳಿಸಿರಿ. (5 × 1 = 5)

16. ಹೆತ್ತ ತಾಯಿ ಹೊತ್ತನಾಡು ________

17. ಆಚಾರವೇ ಸ್ವರ್ಗ ________

18. ಇರುಳು ಕಂಡ ಬಾವಿಗೆ ________

19. ಊರಿಗೆ ಅರಸನಾದರೂ ________

20. ಊರು ಉಪಕಾರ ಅರಿಯದು ________

II. ಕೊಟ್ಟಿರುವ ಪ್ರಶ್ನೆಗಳಿಗೆ ನೀಡಿರುವ ಸೂಚನೆಯಂತೆ ಉತ್ತರ ಬರೆಯಿರಿ.

21. ಕೊಟ್ಟಿರುವ ಪದಗಳು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿವೆ ತಿಳಿಸಿ. (2 × 1 = 2)

(ಅ) ಬಸ್ಸು

(ಆ) ತಂಬಾಕು

22. ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿರಿ. (2 × 1 = 2)

(ಅ) ಊರೂರು

(ಆ) ದೇವೇಂದ್ರ

23. ಕೊಟ್ಟಿರುವ ಪದಗಳನ್ನು ವಿಗ್ರಹವಾಕ್ಯ ಮಾಡಿ ಸಮಾಸವನ್ನು ಹೆಸರಿಸಿರಿ. (2 × 1 = 2)

(ಅ) ಹೆಮ್ಮರ

(ಆ) ಒಗ್ಗಟ್ಟು

24. ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯವನ್ನು ಮಾಡಿ ಬರೆಯಿರಿ. (2 × 1 = 2)

(ಅ) ಪ್ರಯತ್ನಿಸು

(ಆ) ನಿಭಾಯಿಸು



downloaded from: www.kpscvaani.com

Scanned by CamScanner

downloaded from: www.kpscvaani.com

25. ಕೊಟ್ಟಿರುವ ಹೇಳಿಕೆಗಳಿಗೆ ಸೂಕ್ತವಾದ ಒಂದು ಪದವನ್ನು ಬರೆಯಿರಿ. (2 × 1 = 2)

(ಅ) ಸಿರಿಯನ್ನು ಉಳ್ಳವನು

(ಆ) ಕನ್ನಡವನ್ನು ಬಲ್ಲವಳು

26. ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ವಿಭಕ್ತಿಯನ್ನು ಹೆಸರಿಸಿರಿ. (2 × 1 = 2)

(ಅ) ಮನೆಯಲ್ಲಿ

(ಆ) ವಿದ್ಯಾರ್ಥಿಗೆ

27. ಕೊಟ್ಟಿರುವ ವಾಕ್ಯಗಳಲ್ಲಿ ಬಂದಿರುವ ಸರ್ವನಾಮ ಪದವನ್ನು ಆರಿಸಿ ಬರೆಯಿರಿ. (2 × 1 = 2)

(ಅ) ಅವರು ಚೆನ್ನಾಗಿ ಅಭ್ಯಾಸ ಮಾಡುತ್ತಾರೆ.

(ಆ) ನೀನು ತುಂಬಾ ಒಳ್ಳೆಯ ವಿದ್ಯಾರ್ಥಿ.

28. ಕೊಟ್ಟಿರುವ ಪದಗಳಲ್ಲಿ ಬಂದಿರುವ ಅವ್ಯಯ ಪದವನ್ನು ಆರಿಸಿ ಬರೆಯಿರಿ. (2 × 1 = 2)

(ಅ) ಗೌರಿ ಮತ್ತು ಗಣೇಶ ಮನೆಗೆ ಬಂದರು.

(ಆ) ನೀವು ಚೆನ್ನಾಗಿ ಬರೆಯುತ್ತೀರಿ.

29. ಕೊಟ್ಟಿರುವ ವಾಕ್ಯಗಳ ವಚನವನ್ನು ಬದಲಿಸಿ ಬರೆಯಿರಿ. (2 × 1 = 2)

(ಅ) ಅವರು ಆಟವನ್ನು ಆಡುತ್ತಾರೆ.

(ಆ) ನಾನು ದಿನಾಲು ಅಭ್ಯಾಸವನ್ನು ಮಾಡುತ್ತೇನೆ.

30. ಮೊದಲೆರಡು ಪದಗಳಿಗೆ ಇರುವ ಸಂಬಂಧವನ್ನು ಗುರುತಿಸಿ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ. (2 × 1 = 2)

(ಅ) ಶ್ರೀಲತಾ : ಅಂಕಿತನಾಮ : : ವಿದ್ಯಾರ್ಥಿನಿ : ________

(ಆ) ತೆಂಕಣ : ದಿಗ್ವಾಚಕ : : ಐವತ್ತು : ________

31. ಕೊಟ್ಟಿರುವ ವಾಕ್ಯಗಳನ್ನು ಭವಿಷತ್ ಕಾಲಕ್ಕೆ ಪರಿವರ್ತಿಸಿ ಬರೆಯಿರಿ. (2 × 1 = 2)

(ಅ) ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆದರು.

(ಆ) ಶಿಕ್ಷಕರು ಪಾಠವನ್ನು ಬೋಧಿಸುತ್ತಾರೆ.



downloaded from: www.kpscvaani.com

Scanned by CamScanner

downloaded from: www.kpscvaani.com

32. ಕೊಟ್ಟಿರುವ ಪದಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ. (2 × 1 = 2)

(ಅ) ಸ್ಥಾನ

(ಆ) ವಿಜ್ಞಾನ

33. ಕೊಟ್ಟಿರುವ ವಾಕ್ಯಗಳಿಗೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಹಾಕಿ ಬರೆಯಿರಿ. (2 × 1 = 2)

(ಅ) ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ

(ಆ) ಗುರುಪುತ್ರ ಇದು ಅಸಂತೃಪ್ತಿಯ ಫಲ

34. ಕೊಟ್ಟಿರುವ ಪದಗಳಿಗೆ ಗ್ರಾಂಥಿಕ ರೂಪವನ್ನು ಬರೆಯಿರಿ. (2 × 1 = 2)

(ಅ) ಹೀಂಗ

(ಆ) ಇಲ್ಲದ್ಹಂಗ

35. ಕೊಟ್ಟಿರುವ ವಾಕ್ಯಗಳಲ್ಲಿರುವ ಜೋಡುನುಡಿ/ದ್ವಿರುಕ್ತಿಗಳನ್ನು ಗುರುತಿಸಿ ಬರೆಯಿರಿ. (2 × 1 = 2)

(ಅ) ಭಿಕ್ಷುಕರು ಮನೆಮನೆಗಳನು ತಿರುಗಿದರು.

(ಆ) ವಿದ್ಯಾರ್ಥಿಗಳು ಆಟಪಾಠಗಳಲ್ಲಿ ಮುಂದಿರಬೇಕು.

III. ಕೊಟ್ಟಿರುವ ಗದ್ಯಭಾಗಗಳನ್ನು ಓದಿ ಅರ್ಥೈಸಿಕೊಂಡು ಅವುಗಳ ಮುಂದೆ ನೀಡಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

36. ಗದ್ಯಭಾಗ-1 (5 × 1 = 5)

ವಿದ್ಯಾರ್ಜನೆಯ ಸಂದರ್ಭದಲ್ಲಿ ವಿದ್ಯಾರ್ಥಿಯ ಮಾನಸಿಕ ಆರೋಗ್ಯ ಅತ್ಯಂತ ಪ್ರಭಾವ ಬೀರುವ ಅಂಶವಾಗಿದೆ. ಉತ್ತಮ ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಹೊಂದಿದ ವಿದ್ಯಾರ್ಥಿಯು ಅದ್ವಿತೀಯನಾಗಿರುತ್ತಾನೆ. ಹೀಗಾಗಿ ಮನೆ ಮತ್ತು ಶಾಲೆಯಲ್ಲಿ ತಂದೆ-ತಾಯಿ, ಪೋಷಕರ, ಬೋಧಕರ ಪ್ರೀತಿ, ಆದರಗಳು ಮಕ್ಕಳ ಮೇಲೆ ಪ್ರಭಾವ ಬೀರುತ್ತವೆ. ಅದರಲ್ಲೂ ಮನೆಯಲ್ಲಿ ಮಗುವಿನ ಮಾನಸಿಕ ಆರೋಗ್ಯದ ಹೊಣೆಗಾರಿಕೆ ತಾಯಿಯನ್ನೇ ಅವಲಂಬಿಸಿರುವುದರಿಂದ ತಾಯಿಯೇ ಮೊದಲ ಗುರು ಆಗುತ್ತಾಳೆ.



downloaded from: www.kpscvaani.com

Scanned by CamScanner

downloaded from: www.kpscvaani.com

ಮಕ್ಕಳು ಪ್ರಾರಂಭಿಕ ಜೀವನದಲ್ಲಿ ಹೊಂದಿದ ಪ್ರಭಾವಗಳೇ ಮುಂದೆ ಅವರ ಉತ್ತಮ ಮಾನಸಿಕ ಆರೋಗ್ಯಕ್ಕೆ ಭದ್ರ ಬುನಾದಿ ಹಾಕುತ್ತವೆ. ಆದ್ದರಿಂದ ಬಾಲ್ಯದಲ್ಲಿ ಪೋಷಕರು ಧನಾತ್ಮಕ ಹವ್ಯಾಸಗಳನ್ನು ಮಕ್ಕಳಲ್ಲಿ ಬೆಳೆಸಬೇಕಾಗುತ್ತದೆ. ಮನೆಯಲ್ಲಿ ಸಿಗುವ ಪ್ರೀತಿ, ಆದರಗಳು ಮಗುವಿನಲ್ಲಿ ಆತ್ಮವಿಶ್ವಾಸ ಮತ್ತು ಸುರಕ್ಷಿತತೆ ಮನೋಭಾವ ಉಂಟುಮಾಡುತ್ತವೆ. ಆದ್ದರಿಂದ ಮಗುವಿಗೆ ಸಿಗಬೇಕಾದ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವುದು ಅವರ ಕರ್ತವ್ಯವಾಗಿದೆ.

ಪ್ರಶ್ನೆಗಳು :

(ಅ) ಎಂತಹ ವಿದ್ಯಾರ್ಥಿಯು ಅದ್ವಿತೀಯನಾಗಿರುತ್ತಾನೆ?

(ಆ) ಬಾಲ್ಯದಲ್ಲಿ ಮಕ್ಕಳ ಮೇಲೆ ಪ್ರಭಾವವನ್ನುಂಟುಮಾಡುವ ಅಂಶಗಳಾವುವು?

(ಇ) ತಾಯಿಯೇ ಮೊದಲ ಗುರು ಹೇಗಾಗುತ್ತಾಳೆ?

(ಈ) ಪೋಷಕರು ಮಕ್ಕಳಿಗೆ ಬಾಲ್ಯದಲ್ಲಿ ಎಂತಹ ಹವ್ಯಾಸಗಳನ್ನು ಬೆಳೆಸಬೇಕು?

(ಉ) ಪ್ರೀತಿ, ಆದರಗಳು ಮಗುವಿನಲ್ಲಿ ಎಂತಹ ಮನೋಭಾವವನ್ನು ಉಂಟುಮಾಡುತ್ತವೆ?

**37. ಗದ್ಯಭಾಗ–2** **(5 × 1 = 5)**

ಮೌಲಾನಾ ಅಬುಲ್ ಕಲಾಮ್ ಆಜಾದರು 11 ನೇ ನವ್ಹೆಂಬರ್ 1888 ರಲ್ಲಿ ಖೈರೂದ್ದೀನ್ ಮತ್ತು ಅಲಿಯಾಬೇಗಂ ದಂಪತಿಗಳ ಮಗನಾಗಿ ಜನಿಸಿದರು. ಅಬುಲ್ ಕಲಾಮ್‌ರವರು ತಮ್ಮ ಹನ್ನೆರಡನೇ ವಯಸ್ಸಿನಲ್ಲಿ ಅರಬ್ಬೀ, ಫಾರಸಿ ಮತ್ತು ಉರ್ದು ಭಾಷೆಗಳನ್ನು ಓದಿದ್ದರು. ಬಾಲ್ಯದಿಂದಲೇ ಸಾಹಿತ್ಯದ ಅಭಿರುಚಿ ಹೊಂದಿದ ಇವರು "ಆಜಾದ್" ಎಂಬ ಕಾವ್ಯನಾಮದಿಂದ ಸಾಹಿತ್ಯಕೃಷಿ ಮಾಡಿರುವವರು.

ಮೌಲಾನಾ ಆಜಾದರು ಉತ್ತಮ ಪತ್ರಿಕೋದ್ಯಮಿಗಳಾಗಿದ್ದರು. ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೇ ತಮ್ಮ ಸಂಪಾದಕತ್ವದಲ್ಲಿ "ಅಲ್ ಮಿಸ್ ಬಾಹ" ಎಂಬ ಪತ್ರಿಕೆಯನ್ನು ಹೊರತಂದು ಎಲ್ಲರನ್ನೂ ಬೆರಗುಗೊಳಿಸಿದರು. ಅನಂತರ ಅವರು "ಅಲ್ ಹಿಲಾಲ್" ಮತ್ತು "ಅಲ್ ಬಲಾಗ್" ಎಂಬ ಪತ್ರಿಕೆಗಳ ಮೂಲಕ ಭಾರತೀಯರನ್ನು ಜಾಗೃತಗೊಳಿಸಿ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಸಂಗ್ರಾಮದ ಕಿಡಿ ಹೊತ್ತಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದ ಆಜಾದರನ್ನು ಗಾಂಧೀಜಿಯವರು "ಜ್ಞಾನದ ಅರಸ" ಎಂದು ಕರೆದರು. ಆಜಾದರು ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಸಾಧನೆಯನ್ನು ಗಮನಿಸಿ ಭಾರತ ಸರಕಾರ ಅವರಿಗೆ ಮರಣೋತ್ತರ "ಭಾರತರತ್ನ" ಪ್ರಶಸ್ತಿ ನೀಡಿ ಗೌರವಿಸಿದೆ ಹಾಗೂ ಅವರ ಜನ್ಮದಿನವಾದ ನವ್ಹೆಂಬರ್ 11 ರಂದು ಪ್ರತಿವರ್ಷ "ರಾಷ್ಟ್ರೀಯ ಶಿಕ್ಷಣ ದಿನ"ವನ್ನಾಗಿ ಆಚರಿಸಲು ಘೋಷಿಸಿದೆ.



downloaded from: www.kpscvaani.com

Scanned by CamScanner

downloaded from: www.kpscvaani.com

ಪ್ರಶ್ನೆಗಳು :

(ಅ) ಮೌಲಾನಾ ಅಬುಲ್ ಕಲಾಮ್ ಅವರ ತಂದೆ–ತಾಯಿಗಳಾರು?

(ಆ) ಆಜಾದರು ತಮ್ಮ ಹನ್ನೆರಡನೇ ವಯಸ್ಸಿನಲ್ಲಿ ಓದಿದ್ದ ಭಾಷೆಗಳಾವುವು?

(ಇ) ಆಜಾದರು ತಮ್ಮ ಸಂಪಾದಕತ್ವದಲ್ಲಿ ಹೊರತಂದ ಪತ್ರಿಕೆಯ ಹೆಸರೇನು?

(ಈ) ಆಜಾದರು ಯಾವ ಯಾವ ಪತ್ರಿಕೆಗಳ ಮೂಲಕ ಭಾರತೀಯರನ್ನು ಜಾಗೃತಗೊಳಿಸಿದರು?

(ಉ) ಆಜಾದರ ಜನ್ಮದಿನವನ್ನು ಯಾವ ದಿನವನ್ನಾಗಿ ಆಚರಿಸಲಾಗುತ್ತಿದೆ?

38. ಗದ್ಯಭಾಗ–3 **(5 × 1 = 5)**

ಎ.ಆರ್. ಮಣಿಕಾಂತ ಅವರು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಆಯಿತನ ಹಳ್ಳಿಯಲ್ಲಿ ಜನಿಸಿದರು. ಇಂಜಿನಿಯರಿಂಗ್‌ನಲ್ಲಿ ಪದವಿ ಪಡೆದುಕೊಂಡಿರುವ ಇವರು ಪತ್ರಿಕೋದ್ಯಮ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಯ್ ಬೆಂಗಳೂರು, ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ ಪತ್ರಿಕೆಗಳಲ್ಲಿ ಕೆಲವು ಕಾಲ ಕೆಲಸ ಮಾಡಿದ ಇವರು ಸದ್ಯ "ಕನ್ನಡಪ್ರಭ" ದಿನಪತ್ರಿಕೆಯಲ್ಲಿ ಮುಖ್ಯ ಉಪಸಂಪಾದಕರಾಗಿ ಕೆಲಸ ಮಾಡುತ್ತಿದ್ದಾರೆ. ಆ ಪತ್ರಿಕೆಯಲ್ಲಿ "ಭಾವತೀರಯಾನ" ಎಂಬ ಅಂಕಣವನ್ನು ಬರೆದು ಜನಪ್ರಿಯತೆಯನ್ನು ಪಡೆದ ಅವರು "ಭಾವತೀರಯಾನ", "ಹಾಡು ಹುಟ್ಟಿದ ಸಮಯ", "ಈ ಗುಲಾಬಿಯು ನಿನಗಾಗಿ", "ಅಮ್ಮ ಹೇಳಿದ ಎಂಟು ಸುಳ್ಳುಗಳು", "ಅಪ್ಪ ಅಂದ್ರ ಆಕಾಶ" ಮುಂತಾದ ಅಮೂಲ್ಯ ಕೃತಿಗಳನ್ನು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸೇರ್ಪಡೆಗೊಳಿಸಿದ್ದಾರೆ. ಅವರ ಸಾಹಿತ್ಯ ಸೇವೆಯನ್ನು ಗಮನಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ.

ಪ್ರಶ್ನೆಗಳು :

(ಅ) ಎ.ಆರ್. ಮಣಿಕಾಂತ ಅವರು ಓದಿ ಪಡೆದಿರುವ ಪದವಿ ಯಾವುದು?

(ಆ) ಮಣಿಕಾಂತ ಅವರು ಕೆಲಸ ಮಾಡುತ್ತಿರುವ ಕ್ಷೇತ್ರ ಯಾವುದು?

(ಇ) ಸದ್ಯ ಮಣಿಕಾಂತ ಅವರು ಯಾವ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದಾರೆ?

(ಈ) ಮಣಿಕಾಂತ ಅವರು ಬರೆದ ಎರಡು ಪುಸ್ತಕಗಳನ್ನು ಹೆಸರಿಸಿ.

(ಉ) ಮಣಿಕಾಂತ ಅವರು ಯಾವ ಪ್ರಶಸ್ತಿಗೆ ಭಾಜನರಾಗಿದ್ದಾರೆ?



downloaded from: www.kpscvaani.com

Scanned by CamScanner

downloaded from: www.kpscvaani.com

39. ಗದ್ಯಭಾಗ–4

(5 × 1 = 5)

ಬಹಳ ವರ್ಷಗಳ ಹಿಂದೆ ಮೈಸೂರು ರಾಜ್ಯದಲ್ಲಿ "ವಿದ್ಯಾಧರ"ನೆಂಬ ಒಬ್ಬ ಅರಸನಿದ್ದನು. ಆತನು ತನ್ನ ಅರಮನೆಯ ತೋಟದಲ್ಲಿ ಬಗೆಬಗೆಯ ಹೂಗಳನ್ನು ಬೆಳೆಸುವ ಹವ್ಯಾಸವನ್ನು ಬೆಳೆಸಿಕೊಂಡಿದ್ದನು. ಬೇರೆ ಬೇರೆ ದೇಶ, ರಾಜ್ಯಗಳಿಂದಲೂ ಹೂಗಳನ್ನು ತರಿಸಿ ಅದರ ತಳಿಗಳನ್ನು ತನ್ನ ತೋಟದಲ್ಲಿ ಬೆಳೆಸಲು ಪ್ರಯತ್ನಿಸುತ್ತಿದ್ದನು.

ಹೂ ಪ್ರೇಮಿಯಾದ ರಾಜ ವಿದ್ಯಾಧರನಿಗೆ ಪುತ್ರಸಂತಾನ ಇರಲಿಲ್ಲ. ರಾಜ್ಯದ ಉತ್ತರಾಧಿಕಾರಿಯ ಆಯ್ಕೆಗಾಗಿ ಒಂದು ಪರೀಕ್ಷೆಯನ್ನು ಏರ್ಪಡಿಸಲು ಮನಸ್ಸು ಮಾಡಿದನು. ಒಂದು ದಿನ ಊರಲ್ಲಿ ಡಂಗೂರ ಹೊಡೆಸಿ ಮಕ್ಕಳನ್ನು ಅರಮನೆಯ ಅಂಗಳಕ್ಕೆ ಕರೆದು ಹೀಗೆ ಡಂಗೂರ ಸಾರುತ್ತಾನೆ "ನಾನು ಎಲ್ಲಾ ಮಕ್ಕಳಿಗೂ ವಿಧವಿಧವಾದ ಹೂವಿನ ಬೀಜಗಳನ್ನು ಕೊಡುತ್ತೇನೆ. ಆರು ತಿಂಗಳಲ್ಲಿ ಯಾರು ಅದನ್ನು ಚೆನ್ನಾಗಿ ಬೆಳೆಸಿಕೊಂಡು ಬರುವರೋ ಅವರನ್ನು ದತ್ತು ತೆಗೆದುಕೊಂಡು ಮುಂದೆ ರಾಜನನ್ನಾಗಿಸುತ್ತೇನೆ" ಎಂದು ಹೇಳಿ ಬೀಜ ವಿತರಿಸಿ ಕಳುಹಿಸಿದನು.

ಆರು ತಿಂಗಳ ನಂತರ ಒಂದು ದಿವಸ ಎಲ್ಲಾ ಮಕ್ಕಳೂ ಅದ್ಭುತ ರೀತಿಯಲ್ಲಿ ಹೂ ಸಸಿಗಳನ್ನು ಬೆಳೆಸಿಕೊಂಡು ಬಂದಿದ್ದರು. ಬೀಜ ಮೊಳೆಯದಿದ್ದರೆ ಬೇರೆ ಬೇರೆ ಬೀಜಗಳನ್ನು ಎಲ್ಲರೂ ತಂದುಕೊಂಡು ಬೆಳೆಸಿಕೊಂಡು ಬಂದಿದ್ದರು. ಆದರೆ ಒಬ್ಬ ಮಗು ಖಾಲಿ ಕುಂಡದೊಂದಿಗೆ ನಿರಾಶೆಯಿಂದ ಅರಮನೆಗೆ ಬರುತ್ತಾನೆ. ರಾಜನ ಪರೀಕ್ಷೆಯಲ್ಲಿ ಅವನೇ ಆಯ್ಕೆಯಾಗುತ್ತಾನೆ. ಕಾರಣ ರಾಜ ಎಲ್ಲರಿಗೂ ಹುರಿದ ಬೀಜಗಳನ್ನು ನೀಡಿದ್ದ. ಆ ಮಗುವಿನ ಪ್ರಾಮಾಣಿಕತೆಗೆ ಜಯ ಸಿಕ್ಕಿತ್ತು.

ಪ್ರಶ್ನೆಗಳು :

(ಅ) ವಿದ್ಯಾಧರ ಯಾವ ರಾಜ್ಯದ ಅರಸನಾಗಿದ್ದನು?

(ಆ) ರಾಜನಿಗೆ ಯಾವ ಹವ್ಯಾಸವಿತ್ತು?

(ಇ) ರಾಜ ನೀಡಿದ ಹೂ ಬೀಜ ಮೊಳಕೆಯೊಡೆಯದಿರಲು ಕಾರಣವೇನು?

(ಈ) ಡಂಗೂರ ಸಾರಿದ ವಿಷಯವೇನು?

(ಉ) ಯಾವುದಕ್ಕೆ ಜಯ ಸಿಕ್ಕಿತು?

**IV. ಕೊಟ್ಟಿರುವ ಪ್ರಶ್ನೆಗಳಿಗೆ ವಿವರಣಾತ್ಮಕವಾಗಿ ಉತ್ತರ ಬರೆಯಿರಿ.**

40. "ಅಂತರ್ಜಾಲದ ಬಳಕೆ" ಈ ವಿಷಯವನ್ನು ಕುರಿತು 8/10 ವಾಕ್ಯಗಳಲ್ಲಿ ಟಿಪ್ಪಣಿಯನ್ನು ಬರೆಯಿರಿ.

(1 × 5 = 5)



downloaded from: www.kpscvaani.com

Scanned by CamScanner

downloaded from: www.kpscvaani.com

41. "ಮನಸ್ಸಿದ್ದರೆ ಮಾರ್ಗ" ಈ ಗಾದೆಯ ಮಹತ್ತ್ವವನ್ನು ವಿಸ್ತರಿಸಿ ಬರೆಯಿರಿ. (1 × 5 = 5)

42. "ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ. ಇಂದಲ್ಲ ನಾಳೆ ಫಲ ಕೊಡುವುದು" ಈ ಹೇಳಿಕೆಯನ್ನು ಕುರಿತು 8/10 ವಾಕ್ಯಗಳಲ್ಲಿ ವಿಸ್ತರಿಸಿ ಬರೆಯಿರಿ. (1 × 5 = 5)

43. ಕೊಟ್ಟಿರುವ ಪದ್ಯಭಾಗವನ್ನು ಓದಿಕೊಂಡು ನಿಮ್ಮ ಮಾತುಗಳಲ್ಲಿ ಸಾರಾಂಶವನ್ನು ಬರೆಯಿರಿ. (1 × 5 = 5)

ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಸ್ನೇಹಗಳ
ಗುರುತಿಸದಾದೆವು ನಮ್ಮೊಳಗೆ.

44. ಕೊಟ್ಟಿರುವ ಚಿತ್ರವನ್ನು ಗಮನಿಸಿ 8/10 ವಾಕ್ಯಗಳಲ್ಲಿ ನಿಮ್ಮ ಅಭಿಪ್ರಾಯವನ್ನು ಬರೆಯಿರಿ. (1 × 5 = 5)



45. ನಿಮ್ಮನ್ನು ಬಸವನಬಾಗೇವಾಡಿಯ ಶ್ರೀ ಬಸವೇಶ್ವರ ಸರಕಾರಿ ಪ್ರೌಢಶಾಲೆಯ ಸಹಶಿಕ್ಷಕ ಸೋಮಶೇಖರ ಎಂದು ಭಾವಿಸಿಕೊಂಡು ಎರಡು ದಿವಸಗಳ ರಜೆ ಮಂಜೂರಿಗಾಗಿ ಮುಖ್ಯೋಪಾಧ್ಯಾಯರಿಗೆ ಒಂದು ರಜಾ ಅರ್ಜಿ ಬರೆಯಿರಿ. (1 × 5 = 5)



downloaded from: www.kpscvaani.com

Scanned by CamScanner